# 9 ಕೆಜಿ ತೂಕದ ಗಡ್ಡೆ ಹೊರ ತೆಗೆದ ಮಣಿಪಾಲ್ ವೈದ್ಯರು

**ಬೆಂಗಳೂರು, ಸೆ.4-**ಮಣಿಪಾಲ್ ಆಸ್ಪತ್ರೆಯಲ್ಲಿ ವ್ಯಕ್ತಿಯೊಬ್ಬರ ದೇಹದಿಂದ ಒಂಭತ್ತು ಕೆಜಿ ತೂಕದ ಗಡ್ಡೆಯನ್ನು ಹೊರತೆಗೆಯುವಲ್ಲಿ ವೈದ್ಯರು ಯಶಸ್ವಿಯಾಗಿದ್ದಾರೆ.

ಪಶ್ಚಿಮ ಬಂಗಾಳದ 41 ವರ್ಷ ವಯಸ್ಸಿನ ಅಟಲ್ ಸರ್ಕಾರ್ ಎಂಬುವವರು ಕಳೆದ ಮೂರು ತಿಂಗಳಿಂದ ಹೊಟ್ಟೆಯ ಕೆಳಭಾಗದಲ್ಲಿ ಊತ ಮತ್ತು ನೋವಿನಿಂದ ಬಳಲುತ್ತಿದ್ದರು. ನಂತರ ಕ್ಯಾನ್ಸರ್ ರೋಗಶಾಸ್ತ್ರದ ಹೊರರೋಗಿ ವಿಭಾಗಕ್ಕೆ ಬಂದಿದ್ದರು. ಜೊತೆಗೆ ಅವರಿಗೆ ತೂಕ ಕಡಿಮೆಯಾಗುತ್ತಿತ್ತಲ್ಲದೆ, ಮಲಬದ್ಧತೆಯ ತೊಂದರೆಯು ಕಾಡುತ್ತಿತ್ತು. ಅವರಿಗೆ ಬೇರೆ ಯಾವುದೇ ರೋಗದ ಸ್ಥಿತಿ ಇರಲಿಲ್ಲ. ವೈದ್ಯಕೀಯ ಪರೀಕ್ಷೆಯ ನಂತರ ಅವರ ಹೊಟ್ಟೆಯ ಎಡ ಮಧ್ಯಭಾಗದಲ್ಲಿ 20X15 ಸೆಂಟಿಮೀಟರ್ ಗಾತ್ರದ ಗಡ್ಡೆ ಇರುವುದು ಕಂಡುಬಂದಿತ್ತು. ಅದು ಗಟ್ಟಿಯಾಗಿದ್ದು ಚಲನೆಗೆ ಅಡ್ಡಿವುಂಟು ಮಾಡುತ್ತಿತ್ತು. ಜಿಐಎಸ್‌ಟಿ/ರೆಟ್ರೊಪೆರಿಟೋನಿಯಲ್ ಸರ್ಕೋಮಾ ಕುರಿತು ವೈದ್ಯಕೀಯ ಶಂಕೆ ಉಂಟಾಗಿ ಹೊಟ್ಟೆಯ ಭಾಗದ ಸಿಟಿ ಸ್ಕ್ಯಾನ್ ಮತ್ತು ಸಿಟಿ ನಿರ್ದೇಶಿತ ಅಂಗಾಂಶ ಪರೀಕ್ಷೆ ನಡೆಸಿದಾಗ ರೋಗ ದೃಢಪಟ್ಟಿದೆ.

ರೋಗಿಗೆ ಅವರ ಅಸ್ವಸ್ಥತೆ ಮತ್ತು ಶಸ್ತ್ರಕ್ರಿಯೆಯಲ್ಲಿನ ಸಂಕೀರ್ಣ ತೊಂದರೆಗಳನ್ನು ಕುರಿತು ವಿವರಿಸಲಾಗಿತ್ತು. ಜೊತೆಗೆ ಈ ಕ್ರಮದಲ್ಲಿರುವ ಉನ್ನತ ಪ್ರಮಾಣದ ಅಪಾಯದ ಬಗ್ಗೆಯೂ ತಿಳಿಸಲಾಗಿತ್ತು. ನಂತರ ಪ್ರಮುಖ ಲ್ಯಾಪರೋಟೋಮಿ ಶಸ್ತ್ರಚಿಕಿತ್ಸೆ ಮಾಡಿ ಗಡ್ಡೆಯನ್ನು ಯಶಸ್ವಿಯಾಗಿ ತೆರವುಗೊಳಿಸಲಾಯಿತು.

ಶಸ್ತ್ರಚಿಕಿತ್ಸೆ ಸಂದರ್ಭದಲ್ಲಿ 100 ಮಿಲಿ ಲೀಟರ್‌ಗಳಷ್ಟು ರಕ್ತ ನಷ್ಟವಾಗಿತ್ತು. ಶಸ್ತ್ರಕ್ರಿಯಾ ನಂತರ ಅದೇ ದಿನ ಅವರಿಗೆ ದ್ರವ ಸೇವನೆಗೆ ಅವಕಾಶ ಮಾಡಿಕೊಡಲಾಗಿತ್ತು. ಮೂರು ದಿನಗಳ ನಂತರ ಯಾವುದೇ ಸಂಕೀರ್ಣ ತೊಂದರೆಗಳಿಲ್ಲದೆ ಅವರನು ಬಿಡುಗಡೆ ಮಾಡಲಾಗಿತ್ತು.

ಈ ಬಗ್ಗೆ ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯ ಕ್ಯಾನ್ಸರ್‌ರೋಗ ಶಸ್ತ್ರಚಿಕಿತ್ಸಾ ತಜ್ಞರಾದ ಡಾ. ಶಬೀರ್ ಎಸ್. ಝವೇರಿ ಮಾತನಾಡಿ, ಸುಮಾರು 9 ಕಿಲೋ ತೂಕವಿದ್ದ ಗಡ್ಡೆಯನ್ನು ತೆಗೆದುಹಾಕಲು ಸತತ 6 ಗಂಟೆಗಳಿಗೂ ಹೆಚ್ಚಿನ ಕಾಲ ಶಸ್ತ್ರಚಿಕಿತ್ಸೆ ನಡೆಸಲಾಯಿತು. ಮೂತ್ರಪಿಂಡಗಳು, ಕರುಳುಗಳಂತಹ ಯಾವುದೇ ಪ್ರಮುಖ ಅಂಗಗಳನ್ನು ತೆಗೆದು ಹಾಕಬೇಕಾಗಿ ಬರಲಿಲ್ಲ. ಆದ್ದರಿಂದ ಅವರು ಕ್ಷಿಪ್ರಗತಿಯಲ್ಲಿ ಚೇತರಿಸಿ ಕೊಂಡಿದ್ದರು. ಗಡ್ಡೆಯನ್ನು ಪೂರ್ಣವಾಗಿ ಹೊರತೆಗೆದಿದ್ದರಿಂದ ಕಿಮೋಥೆರಪಿ ಅಥವ ವಿಕಿರಣ ಚಿಕಿತ್ಸೆಯಂತಹ ಕ್ರಮಗಳು ಇರಲಿಲ್ಲ. ಈಗ ಅವರು ಸಂಪೂರ್ಣವಾಗಿ ಗುಣಮುಖರಾಗಿದ್ದಾರೆ. ಗಡ್ಡೆ ಮತ್ತೆ ಕಾಣಿಸಿಕೊಳ್ಳುವ ಸಾಧ್ಯತೆ ಇರುವುದಿಲ್ಲ ಎಂದರು.

ಬೆಂಗಳೂರು: ವ್ಯಕ್ತಿಯೊಬ್ಬರ ದೇಹದಲ್ಲಿ ಸಂಗ್ರಹವಾಗಿದ್ದ 9 ಕೆ.ಜಿ ತೂಕದ ಗಡ್ಡೆಯನ್ನು ಮಣಿಪಾಲ್ ಆಸ್ಪತ್ರೆಯ ವೈದ್ಯರು ಶಸ್ತ್ರಚಿಕಿತ್ಸೆ ಮೂಲಕ ಯಶಸ್ವಿಯಾಗಿ ಹೊರತೆಗೆದಿದ್ದಾರೆ.

ಪಶ್ಚಿಮ ಬಂಗಾಳದ 41 ವರ್ಷದ ಅಟಲ್ ಸರ್ಕಾರ್ ಎಂಬುವರು ಮೂರು ತಿಂಗಳುಗಳಿಂದ ಹೊಟ್ಟೆಯ ಕೆಳಭಾಗದಲ್ಲಿ ನೋವು, ಮಲಬದ್ಧತೆ ಹಾಗೂ ಊತದ ಸಮಸ್ಯೆಯಿಂದ ಬಳಲುತ್ತಿದ್ದರು. ಹೊಟ್ಟೆಯಲ್ಲಿ ರೆಟ್ರೋಪೆರಿಟೋನಿಯಲ್ ಮಾಸ್ ಗಡ್ಡೆ ಇರುವುದು ಪತ್ತೆಯಾಯಿತು. ಇದರಿಂದ ಕರುಳಿನ ಭಾಗ ಗಮನಾರ್ಹವಾಗಿ ಪಕ್ಕಕ್ಕೆ ತಳ್ಳಲ್ಪಟ್ಟಿತ್ತು. ಜೊತೆಗೆ ಮೂತ್ರನಾಳಗಳ ಮೇಲೆ ಒತ್ತಡ ಉಂಟಾಗುತ್ತಿತ್ತು. ಹೀಗಾಗಿ, ಲ್ಯಾಪರೋಟೋಮಿ ಶಸ್ತ್ರಚಿಕಿತ್ಸೆ ಮಾಡಲಾಯಿತು.

'ಕರುಳುಗಳ ಹಿಂದೆ ಬೆಳೆದಿದ್ದ ಗಡ್ಡೆಯಿಂದ ರೋಗಿಗೆ ತಿನ್ನಲು, ಕುಡಿಯಲು ಕಷ್ಟವಾಗುತ್ತಿತ್ತು. ಆರು ಗಂಟೆಗಳ ಕಾಲ ಶಸ್ತ್ರಚಿಕಿತ್ಸೆ ಮಾಡಿ ಗಡ್ಡೆಯನ್ನು ಹೊರತೆಗೆಯಲಾಯಿತು. ಅವರು ಸಂಪೂರ್ಣವಾಗಿ ಗುಣಮುಖರಾಗಿದ್ದಾರೆ' ಎಂದು ಮಣಿಪಾಲ್ ಆಸ್ಪತ್ರೆಯ ತಜ್ಞ ಡಾ.ಶಬೀರ್ ಎಸ್.ಜವೇರಿ ತಿಳಿಸಿದರು.

# ಹೊಟ್ಟೆಯಲ್ಲಿದ್ದ 9 ಕೆಜಿ ಗಡ್ಡೆ ಹೊರಕ್ಕೆ

**ಬೆಂಗಳೂರು:** ಮಣಿಪಾಲ್ ಆಸ್ಪತ್ರೆಯಲ್ಲಿ ವ್ಯಕ್ತಿಯೊಬ್ಬರ ಹೊಟ್ಟೆಯಿಂದ ಒಂಬತ್ತು ಕೆಜಿ ತೂಕದ ಗಡ್ಡೆಯನ್ನು ಹೊರ ತೆಗೆಯುವಲ್ಲಿ ವೈದ್ಯರು ಯಶಸ್ವಿಯಾಗಿದ್ದಾರೆ. ಪಶ್ಚಿಮ ಬಂಗಾಳದ 41 ವರ್ಷದ ಅಟಲ್ ಸರ್ಕಾರ್ ಎಂಬುವವರು ಕಳೆ ಮೂರು ತಿಂಗಳಿನಿಂದ ಹೊಟ್ಟೆಯ ಕೆಳಭಾಗದಲ್ಲಿ ಊತ ಮತ್ತು ನೋವಿನಿಂದ ಬಳಲುತ್ತಿದ್ದರು. ನಂತರ ಕ್ಯಾನ್ಸರ್ ರೋಗಶಾಸ್ತ್ರದ ಹೊರರೋಗಿ ವಿಭಾಗಕ್ಕೆ ಬಂದಿದ್ದರು. ಜತೆಗೆ ಅವರಿಗೆ ತೂಕ ಕಡಿಮೆಯಾಗುತ್ತಿದ್ದಲ್ಲದೆ, ಮಲ ಬದ್ಧತೆಯ ತೊಂದರೆಯೂ ಕಾಡುತ್ತಿತ್ತು. ಅವರಿಗೆ ಬೇರೇ ಯಾವುದೇ ರೋಗದ ಸ್ಥಿತಿ ಇರಲಿಲ್ಲ. ವೈದ್ಯಕೀಯ ಪರೀಕ್ಷೆಯ ನಂತರ ಅವರ ಹೊಟ್ಟೆಯ ಎಡಭಾಗದಲ್ಲಿ ಗಡ್ಡೆ ಇರುವುದು ಕಂಡು ಬಂತು.

ಅದು ಗಟ್ಟಿಯಾಗಿದ್ದು, ಚಲನೆಗೆ ಅಡ್ಡಿವುಂಡು ಮಾಡುತ್ತಿತ್ತು. ವೈದ್ಯಕೀಯ ಪರೀಕ್ಷೆಗಳ ಮೂಲಕ ರೋಗ ದೃಢಪಟ್ಟಿತ್ತು. ರೋಗಿಗೆ ಅವರ ಅಸ್ವಸ್ಥತೆ ಮತ್ತು ಶಸ್ತ್ರಕ್ರಿಯೆಯಲ್ಲಿನ ಸಂಕೀರ್ಣ ತೊಂದರೆಗಳನ್ನು ಕುರಿತು ವಿವರಿಸಲಾಗಿತ್ತು. ನಂತರ ಪ್ರಮುಖ ಲ್ಯಾಪರೋಟೋಮಿ ಶಸ್ತ್ರ ಚಿಕಿತ್ಸೆ ಮಾಡಿ ಗಡ್ಡೆಯನ್ನು ಯಶಸ್ವಿಯಾಗಿ ತೆರವುಗೊಳಿಸಲಾಯಿತು.